ತುರುವೇಕೆರೆ ತಾಲ್ಲೂಕಿನಲ್ಲಿರುವ ಪಶು ಚಿಕಿತ್ಸಾ ಕೇಂದ್ರಗಳು

4622 (5353) : ಶ್ರೀ ಎಂ.ಡಿ ಲಕ್ಷ್ಮೀನಾರಾಯಣ (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿರುವ ಪಶು ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲು ಸರ್ಕಾರ ಕ್ರಮ ತೆಗೆದುಕೊಂಡಿದೆಯೇ;

ಆ) ಹಾಗಿದ್ದಲ್ಲಿ, ಯಾವ್ಯಾವ ಕೇಂದ್ರಗಳನ್ನು ಆಸ್ಪತ್ರೆಗಳಾಗಿ ಯಾವಾಗ ಮಾರ್ಪಾಡು ಮಾಡಲಾಗುವುದು?

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಈ ತರಹದ ಪ್ರಸ್ತಾಚನೆ ಸರ್ಕಾರದ ಮುಂದೆ ಸದ್ಯಕ್ಕೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಉತ್ತರ ಕನ್ನಡ ಜಿಲ್ಲೆಯ ಕುಮಟಾದಲ್ಲಿ ವಸತಿ ಶಾಲೆ ಪ್ರಾರಂಭಿಸುವುದರ ಬಗ್ಗೆ

4673 (5370) : ಶ್ರೀ ಮೋಹನ್ ಕೆ ಶೆಟ್ಟಿ (ಕುಮುಟ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಕರಾವಳಿ ತಾಲ್ಲೂಕುಗಳಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಅಥವಾ ಯಾವುದೇ ವಸತಿ ಶಾಲೆಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಕರಾವಳಿ ತಾಲ್ಲೂಕುಗಳ ಮಧ್ಯ ಭಾಗದಲ್ಲಿರುವ ಕುಮಟಾದಲ್ಲಿ ವಸತಿ ಶಾಲೆ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ 2 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು (ಮಾಗೋಡು ಫಾಲ್ಸ್‌ನಲ್ಲಿ ಮತ್ತು ಮುಂಡಗೋಡಿನಲ್ಲಿ ಕಾರ್ಯನಿರ್ವಹಿಸುತ್ತಿವೆ.

ಆ) ಸದ್ಯಕ್ಕೆ ಉತ್ತರ ಕನ್ನಡ ಜಿಲ್ಲೆಗೆ ಮತ್ತೊಂದು ವಸತಿ ಶಾಲೆಯನ್ನು ಮಂಜೂರುಗೊಳಿಸುವ ಪ್ರಸ್ತಾಪವಿರುವುದಿಲ್ಲ.

ರಾಜ್ಯದ ಹೊಸ ಔದ್ಯೋಗಿಕ ನೀತಿ

4624 (5355) : ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತಿಕೋಟ) ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಹೊಸ ಔದ್ಯೋಗಿಕ ನೀತಿಗೆ ಅನುಗುಣವಾಗಿ 2001 ರಿಂದ 2003ನೇ ಸಾಲಿನಲ್ಲಿ ಸಣ್ಣ ಕೈಗಾರಿಕೆಗಳಿಗೆ ಶೇ. 15 ರಷ್ಟು ದರದ ರಿಯಾಯಿತಿಯನ್ನು ಘೋಷಿಸಿರುವುದರ ಅನ್ವಯ ಲಾಭಾಂಶ ಪಡೆದಂತಹ ಘಟಕಗಳ ಸಂಖ್ಯೆ ಎಷ್ಟು?

ಆ) ಈ ಔದ್ಯೋಗಿಕ ನೀತಿಯ ಅನ್ವಯ ಲಾಭಾಂಶ ಪಡೆದು ಸರ್ಕಾರಕ್ಕೆ ತಮ್ಮ ಸರಕುಗಳನ್ನು ಸರಬರಾಜು ಮಾಡಿದ ಸಂಸ್ಥೆಗಳು ಯಾವುವು (ಸಂಸ್ಥೆಗಳ ಹೆಸರನ್ನು ಒದಗಿಸುವುದು)

ಇ) ಈ ರಿಯಾಯಿತಿ ಅಡಿ ಆರೋಗ್ಯ ಇಲಾಖೆಗೆ ಔಷಧ ಸರಬರಾಜು ಮಾಡಿದ ಸಂಸ್ಥೆಗಳು ಯಾವುವು (ಸಂಸ್ಥೆಗಳ ಹೆಸರನ್ನು ಒದಗಿಸುವುದು ಮತ್ತು ಅವು ಒದಗಿಸಿದ ಔಷಧಿಗಳ ಹೆಸರನ್ನು ಕಂಪನಿವಾರು ಒದಗಿಸುವುದು)